ಶ್ರೀ ಎಂ. ಎಚ್. ಬೆಕಿನಾಳ್ಕರ್.—ಸ್ವಾಮಿ, ಈ ಲೈಮ್‌ಸ್ಟೋನ್ ಪರ್ಸೆಂಟೇಜ್ ಎಷ್ಟು ಎಂದು ಹೇಳುವುದಕ್ಕೆ ಆಗುತ್ತದೆಯೆ ?

ಶ್ರೀ ಜಿ. ಮಾದೇಗೌಡ (ಮುಖ್ಯ ಮಂತ್ರಿಗಳ ಪರವಾಗಿ).—ಅದನ್ನು ಇನ್ನೂ ಸರ್ವೆ ಮಾಡಿಲ್ಲ ವೆಂದು ಉತ್ತರದಲ್ಲಿ ಹೇಳಿದ್ದೇನೆ.

ಶ್ರೀ ಎಂ. ಎಚ್. ಬೆಕಿನಾಳ್ಕರ್.—ಈಗ ಸಿಂದಗಿಯಿಂದ ಶ್ರೀ ಶಶಿಕಾಂತ ಎಸ್. ಹಿರೇಮಠ ಎಂಬುವವರು ಅರ್ಜಿಯನ್ನು ಹಾಕಿಕೊಂಡಿದ್ದಾರೆ. ತಮ್ಮ ಉತ್ತರದಲ್ಲಿ ಯಾರಾದರೂ ಬಂದರೆ ಸರ್ವೆ ಮಾಡಿಸಿ ಸಹಾಯ ಮಾಡುತ್ತೇವೆ, ತಾಂತ್ರಿಕ ನೆರವು ಮತ್ತು ಆರ್ಥಿಕ ಸಹಾಯ ಮಾಡಲಾಗುವುದು ಎಂದು ಹೇಳಿದ್ದೀರಿ. ಇದನ್ನು ಎಷ್ಟರಮಟ್ಟಿಗೆ ಮಾಡುತ್ತೀರಿ ಸ್ವಾಮಿ ?

ಶ್ರೀ ಜಿ. ಮಾದೇಗೌಡ.—ಈ ಪಶ್ನೆ ಬಂದಮೇಲೆ ಒಂದು ಅರ್ಜಿ ಬಂದಿದೆ ಎಂದು ಕೇಳಿದ್ದೇನೆ. ಸಿಮೆಂಟ್ ತಯಾರು ಮಾಡಬೇಕಾದರೆ ೪೮ ಪರ್ಸೆಂಟ್ ಕ್ಯಾಲ್ಸಿಯಂ ಇರಬೇಕು, ೬ ಪರ್ಸೆಂಟ್ ಸಿಲಿಕಾನ್ ಆಕ್ಸೈಡ್, ೩ ಪರ್ಸೆಂಟ್ ಮ್ಯಾಂಗನೀಸ್ ಆಕ್ಸೈಡ್ ಇರಬೇಕಾಗುತ್ತದೆ. ಇದನ್ನು ತಯಾರಿಸಲು ಯಾರಾದರೂ ಬಂದು ಅರ್ಜಿ ಹಾಕಿಕೊಂಡರೆ ಅದನ್ನು ಉಚಿತವಾಗಿ ಕೊಡುವುದಕ್ಕೆ ತೊಂದರೆ ಏನೂ ಇಲ್ಲ.

ಶ್ರೀ ಎಂ. ಎಚ್ ಬೆಕಿನಾಳ್ಕರ್.—ನನಗೆ ತಿಳಿದ ಪ್ರಕಾರ ಈ ಜಾಗದಲ್ಲಿ ಒಂದು ಸಾವಿರ ಎಕರೆಗೆ ಮೇಲ್ಪಟ್ಟು ಲೈಮ್‌ಸ್ಟೋನ್ ಸಿಗುವ ಸಾಧ್ಯತೆ ಇದೆ. ಸರ್ಕಾರಿ ಕ್ಷೇತ್ರದಲ್ಲಿ ಸಿಮೆಂಟ್ ಫ್ಯಾಕ್ಟರಿ ತೆಗೆಯಲು ಸಾಧ್ಯವಾಗುತ್ತದೆಯೆ ?

ಶ್ರೀ ಜಿ. ಮಾದೇಗೌಡ.—ಈ ಭಾಗದಲ್ಲಿ ಸರಿಯಾಗಿ ಸರ್ವೆ ಆಗಿಲ್ಲವೆಂದು ಮೊದಲೇ ಹೇಳಿದ್ದೇನೆ. ಈ ವರ್ಷ ಸರ್ವೆ ಮಾಡಿಸುತ್ತಿದ್ದೇವೆ. ಸಿಮೆಂಟ್ ಉತ್ಪಾದನೆಗೆ ೪೮ ಪರ್ಸೆಂಟ್ ಲೈಮ್‌ಸ್ಟೋನ್ ಇರಬೇಕಾಗಿರುವಾಗ, ಆ ಪ್ರದೇಶದಲ್ಲಿ ಆ ಪ್ರಮಾಣದಲ್ಲಿ ಅದು ಸಿಗುವ ಹಾಗಿದ್ದರೆ ಖಾಸಗಿಯಾಗಿ ಬಂದರೂ ಕೊಡುತ್ತೇವೆ ಮತ್ತು ಸರ್ಕಾರದ ವಲಯದಿಂದ ಕೊಡುವುದಕ್ಕೂ ಕೂಡ ಬರುತ್ತದೆ. ಯಾವುದಕ್ಕೂ ಸರ್ವೆ ಆದಮೇಲೆ ಏನು ತೀರ್ಮಾನ ತೆಗೆದುಕೊಳ್ಳಬೇಕೋ ಅದನ್ನು ತೆಗೆದುಕೊಳ್ಳುತ್ತೇವೆ.

Construction of C. I. Wells in Bidar District

454. SRI BHIMANNA KHANDRE (Bhalki).—Will the Minister for Rural Development and Panchayat Raj be pleased to state.—

(a) the No. of C.I. wells which construction work was taken up since 1972–75 in Bidar District ;

(b) the No. of such irrigation wells completed/not completed ;

(c) the estimated expenditure of each of such wells, expenditur so far incurred (village–wise and Taluk–wise details to be furnished);

(d) whether any representations have been received for completion of these wells ?

SRI B. RAMAIAH (Minister for Rural Development and Panchayat Raj).—

(a) 61 C. I. Wells

(b) (1) 28 wells completed. Out of 21 C.I. Wells completed. 3 wells collapsed.

(2) 33 wells yet to be completed.

*(c) Details are furnished in the Annexures is laid on the Table

(d) Yes.

ಶ್ರೀ ಎಸ್. ಭೀಮಣ್ಣ ಖಂಡ್ರೆ.—ಭಾವಿ ತೆಗೆಸಿ ಇವತ್ತಿಗೆ ಹತ್ತು ವರ್ಷ ಆಯಿತು. ಹತ್ತು ವರ್ಷಗಳಲ್ಲಿ ೨೦ ಲಕ್ಷ ರೂಪಾಯಿ ಖರ್ಚಾಗಿದೆ. ೨೨ ಭಾವಿಗಳು ಪೂರ್ತಿಯಾಗಿವೆ ಎಂದು ತಾವೇನೋ ಹಣ ಖರ್ಚುಮಾಡಿದ್ದೀರಿ. ಸುಲ್ತಾನಪುರ, ಖಾಸಿಂಪುರ, ಹಮ್ನಾಪುರ, ಬಾಲ್ಕಿ ಮೊದಲಾದ ಕಡೆಗಳಲ್ಲಿ ಶೇ. ೯೦ರಷ್ಟು ಹಣ ಖರ್ಚಾಗಿದೆ. ಪ್ರತಿಯೊಂದು ಕಡೆಗೂ ಇನ್ನೂ ತಲಾ ಐದು ಸಾವಿರ ರೂಪಾಯಿಯಂತೆ ಹೆಚ್ಚು ಖರ್ಚುಮಾಡಿದರೆ ಇನ್ನೂ ೨೪ ಭಾವಿಗಳು ಪೂರ್ತಿಯಾಗಿ ಸುಮಾರು ಐದು ನೂರು ಎಕರೆ ಭೂಮಿಗೆ ನೀರಾವರಿ ಸೌಕರ್ಯ ಕೈಗೊಳ್ಳಲು ಸಾಧ್ಯವಾಗುತ್ತದೆ. ಹತ್ತು ವರ್ಷಗಳಿಂದಲೂ ಇದು ಆಗುತ್ತಿಲ್ಲ. ಇದಕ್ಕೇನು ಕಾರಣ ಸ್ವಾಮಿ ?

ಶ್ರೀ ಬಿ. ರಾಮಯ್ಯ. — ೧೯೭೨ರ ಬರಗಾಲ ಪೀಡಿತ ಕಾರ್ಯ ಕ್ರಮದ ಅಡಿಯಲ್ಲಿ ಈ ಕಾರ್ಯ ಕ್ರಮವನ್ನು ತೆಗೆದುಕೊಳ್ಳಲಾಗಿತ್ತು. ಸುಮಾರು ೬೧ ಭಾವಿಗಳನ್ನು ತೆಗೆದಿದ್ದೇವೆ. ಇನ್ನೂ ೨೮ ಭಾವಿಗಳು ಪೂರ್ತಿಯಾಗಬೇಕಾಗಿದ್ದು ನಾವು ಈಗಾಗಲೇ ಜಿಲ್ಲಾಧಿಕಾರಿಗಳಿಗೆ ಆದೇಶವನ್ನು ಕೊಟ್ಟಿದ್ದೇವೆ. ನವ್ಹು ಡಿಆರ್‌ಎಸ್‌ನಲ್ಲಿ ಕೆಲವು ಕಾರ್ಯಕ್ರಮಗಳಿವೆ. ಸ್ಪೆಷಲ್ ಕಾಂಪೊನೆಂಟ್ ಪ್ಲಾನ್ ಆಗಲಿ, ಎನ್‌ಆರ್‌ಇಪಿ ಅಥವಾ ಟಿಡಿಬಿಯ ಫಂಡ್ ತೆಗೆದುಕೊಂಡು ಈ ಕೆಲಸ ಪೂರೈಸುವಂತೆ ಆದೇಶ ಈಗಾಗಲೇ ನೀಡಲಾಗಿದೆ. ಅಭಾವ ಪರಿಹಾರಕ್ಕಾಗಿ ಕಂದಾಯ ಇಲಾಖೆಯವರು ಈ ಕೆಲಸವನ್ನು ಮೊದಲು ತೆಗೆದುಕೊಂಡಿದ್ದರು. ಈ ಕೆಲಸವನ್ನು ಮುಂದುವರೆಸುವ ಜವಾಬ್ದಾರಿಯನ್ನು ನಾವು ವಹಿಸಿಕೊಂಡು ಡಿಆರ್‌ಡಿಎ ಸೊಸೈಟಿಯಲ್ಲಿರತಕ್ಕಂಥ ಹಣವನ್ನು ಸೂಕ್ತವಾದ ರೀತಿಯಲ್ಲಿ ಉಪಯೋಗಿಸಿ ಇದನ್ನು ಮುಗಿಸಿಕೊಡಿ ಎಂದು ಆದೇಶ ಕೊಟ್ಟಿದ್ದೇವೆ. ಮಾನ್ಯ ಸದ್ಯರು ಹೇಳಿದ ಹಾಗೆ ಇನ್ನು ಐದೈದು ಸಾವಿರ ರೂಪಾಯಿಗಳಲ್ಲಿ ಈ ಕೆಲಸ ಆಗುವ ಹಾಗಿದ್ದರೆ, ಅದೇ ಪ್ರಕಾರವಾಗಿ ನಾನು ಸಂಬಂಧಪಟ್ಟವರಿಗೆ ಸಲಹೆ ಕೊಡುತ್ತೇನೆ.

ಶ್ರೀ ಎಸ್ ಭೀಮಣ್ಣ ಖಂಡ್ರೆ.—ಹಿಂದೆ ಡಿಡಿಸಿ ಕಮಿಟಿಯಲ್ಲಿ ೩೬ ನಿರ್ಣಯಗಳನ್ನು ತೆಗೆದುಕೊಳ್ಳಲಾಗಿತ್ತು. ಆದರೆ ಹತ್ತು ವರ್ಷಗಳಿಂದ ಇದು ಯಾವ ಖಾತೆಗೆ ಸಂಬಂಧಪಟ್ಟದ್ದೆಂಬುದೇ ತೀರ್ಮಾನವಾಗಿಲ್ಲ. ಡಿ. ಸಿ ಯವರನ್ನು ಕೇಳಿದಾಗ ಅವರು ಡಿಡಿಸಿ ಕಮಿಟಿಯ ಅಧ್ಯಕ್ಷರಾಗಿದ್ದರೂ ಕೂಡ ಸರಿಯಾದ ಮಾಹಿತಿ ಸಿಗಲಿಲ್ಲ. ಇದು ಯಾವ ಖಾತೆಗೆ ಸಂಬಂಧಪಟ್ಟಿದ್ದು ಮತ್ತು ಇನ್ನೆಷ್ಟು ದಿನಗಳಲ್ಲಿ ಇದನ್ನು ಮಾಡಿಕೊಡುತ್ತೀರಿ ಸ್ವಾಮಿ ?

ಶ್ರೀ ಬಿ. ರಾಮಯ್ಯ. — ನಾನು ವಿವರವಾಗಿ ಹೇಳಿದ್ದೇನೆ. ೧೯೭೨-೭೫ರಲ್ಲಿ ರೆವಿನ್ಯೂ ಇಲಾಖೆಯವರು ಬರಗಾಲ ಪೀಡಿತ ಕಾಮಗಾರಿಯಲ್ಲಿ ಇದನ್ನು ತೆಗೆದುಕೊಂಡಿದ್ದರು. ಅವರು ಕೆಲಸ ಮಾಡಿದ ನಂತರ ಅದನ್ನು ಮುಂದುವರಿಸುವ ಜವಾಬ್ದಾರಿಯನ್ನು ಟಿಜಿಬಿಯವರು ತೆಗೆದುಕೊಂಡು ಕೆಲವು ಭಾವಿಗಳನ್ನು ತೆಗೆದಿದ್ದಾರೆ. ಈ ಎಲ್ಲಾ ಜವಾಬ್ದಾರಿಯನ್ನು ನಾವೇ ವಹಿಸಿಕೊಂಡಿದ್ದೇವೆ ಎಂದು ಹೇಳುತ್ತಿದ್ದೇನಲ್ಲ ? ರೆವಿನ್ಯೂ ಇಲಾಖೆಯಿಂದ ಇದನ್ನು ವಹಿಸಿಕೊಂಡು ಈಗಾಗಲೇ ಜಿಲ್ಲಾಧಿಕಾರಿಯವರಿಗೆ ಆದೇಶವನ್ನೂ ಕೂಡ ಕೊಡಲಾಗಿದೆ. ನಮ್ಮಲ್ಲಿ ಹಣಕ್ಕೇನೂ ಕೊರತೆ ಇಲ್ಲ.

ಶ್ರೀ ಎಸ್. ಭೀಮಣ್ಣ ಖಂಡ್ರೆ. — ಇದೇ ಸ್ಕೀಮಿನ ಕೆಳಗಡೆ ತಾಲ್ಲೂಕ್ ಬೋರ್ಡ್‌ನಿಂದ ಒಂದೂ ಲಕ್ಷ ರೂಪಾಯಿ ಖರ್ಚುಮಾಡಿದರೆ ಒಂದು ೧೦೦ ಎಕರೆ ಭೂಮಿ ಅಲ್ಲಿ ಇರಿಗೇಟ್ ಆಗುತ್ತದೆ. ಆದರೂ ತಾವು ಒಂದು ಲಕ್ಷ ರೂಪಾಯಿ ಕೊಟ್ಟಿದ್ದೀರಿ ಬರೀ ಪೈಪು ಖರೀದಿಮಾಡಿ ಕಮಿಷನ್ ಎಂದು ಕನ್ಸರ್ನ್ ಇದ್ದವರು ತೋರಿಸಿಬಿಟ್ಟಿದ್ದಾರೆ. ಇನ್ನೂ ಪೈಪ್ ಎಲ್ಲಾ ಹಾಗೇ ಬಿದ್ದಿವೆ, ಕೆಲಸ ಆಗುತ್ತಾ ಇಲ್ಲ. ಆದು ಒಂದು ೧೦೦ ಎಕರೆ ಭೂಮಿ ಆಗಬಹುದು. ಈ ಒಂದು ಕೆಲಸಗಳಿಗೆ ತಾವು ಏನು ಹಣ ಕೊಟ್ಟಿದ್ದೀರಿ, ಆ ಡೇಟ್ ಯಾವಾಗ ಎಂದು ತಿಳಿಸಿದ್ದೀರಾ ಇನ್ನೂ ಆರ್ಡರ್ ಇಷ್ಟೂ ಆಗಿಲ್ಲ ಎಂದು ನನಗನ್ನಿಸುತ್ತದೆ. ತಾವು ಸ್ವಲ್ಪ ತಿಳಿದುಕೊಳ್ಳಿ. ಯಾವ ಡೇಟಿಗೆ ಡೆಪ್ಯುಟಿ ಕಮಿಷನರಿಗೆ ಆರ್ಡರ್ ಕೊಟ್ಟಿದ್ದಾರೆ. ಅತ್ತಿಕಾಮಟ್ಟ ಸಮೇತ ಲಿಫ್ಟ್ ಇರಿಗೇಷನ್ ಸ್ಕೀಂ ಇದೆ. ೧೮ ಬಾವಿಗಳನ್ನು ಎಷ್ಟು ದಿವಸದಲ್ಲಿ ಪ್ರಾರಂಭ ಮಾಡಿ, ಎಷ್ಟು ದಿವಸಗಳಲ್ಲಿ ಮುಗಿಸುತ್ತಾ ಇದ್ದೀರಾ ಎಂದು ದಯಮಾಡಿ ಆಶ್ವಾಸನೆ ಕೊಡಬೇಕು.

---

* Lib. No. 49, dated 19-7-1982

ಶ್ರೀ ಬಿ. ರಾಮಯ್ಯ.— ಸನ್ಮಾನ್ಯ ಅಧ್ಯಕ್ಷರೆ, ಪೈಪ್ಸ್ ಬಿದ್ದಿದೆ ಎಂದು ಇದನ್ನೆಲ್ಲಾ ಮಾನ್ಯ ಸದಸ್ಯರು ಹೇಳುತ್ತಾ ಇದ್ದಾರೆ. ನಾನು ತಕ್ಷಣ ಜಿಲ್ಲಾಧಿಕಾರಿಗಳಿಗೆ ತಿಳಿವಳಿಕೆ ಕೊಟ್ಟು ಆ ವ್ಯವಸ್ಥೆಗಳನ್ನು ಮಾಡತಕ್ಕ ಜವಾಬ್ದಾರಿಯನ್ನು ಅವರಿಗೆ ಹೇಳುತ್ತೇನೆ. ಮತ್ತು ಬಾವಿಯನ್ನು ಯಾವಾಗ ಪ್ರಾರಂಭ ಮಾಡುತ್ತೀರಿ, ಯಾವಾಗ ಕಂಪ್ಲೀಟ್ ಮಾಡುತ್ತೀರಿ ಎಂದು ಕೇಳಿದ್ದಾರೆ. ಹಣ ನಮ್ಮ ಕೈಯಲ್ಲೇ ಇದೆ. ಕೆಲಸಕ್ಕೆ ಬೇಕಾದಷ್ಟು ವ್ಯವಸ್ಥೆಯಿದೆ. ತಕ್ಷಣ ಶುರುಮಾಡಿ ಎಂದು ಆದೇಶ ಕೊಡುತ್ತೇನೆ. ಯಾವಾಗ ಕಂಪ್ಲೀಟ್ ಮಾಡುತ್ತೀರಿ, ಕೊನೇ ದಿನ ಹೇಳಿ ಅಂದರೆ ಕಷ್ಟವಾಗುತ್ತದೆ. ಕೆಲಸ ಮಾಡತಕ್ಕ ಕಾಲದಲ್ಲಿ ನಾನು ಅವರಿಗೆ ತಿಳಿಸುತ್ತೇನೆ. ಮತ್ತೆ ಯಾವ ತಾರೀಖಿನಲ್ಲಿ ಆದೇಶವನ್ನು ಕಳಿಸಿದ್ದೀರಿ ಎಂದು ಕೇಳಿದ್ದಾರೆ. ಆ ತಾರೀಖಿನ್ನು ಮಾನ್ಯ ಸದಸ್ಯರಿಗೆ ನಾನು ಓದಗಿಸಿಕೊಡುತ್ತೇನೆ.

ಶ್ರೀ ಎಸ್. ಭೀಮಣ್ಣ ಖಂಡ್ರೆ.— ತಾವು ಮೂರು ಬಾವಿ ಕೊಲ್ಯಾಪ್ಸ್ ಆಗಿದೆ ಎಂದು ಹೇಳಿದಿರಿ, ೫೦-೫೮ ಸಾವಿರ ರೂಪಾಯಿ ಖರ್ಚುಮಾಡಿ ಕೊಲ್ಯಾಪ್ಸ್ ಆಗಿದೆ ಎಂದು ಹೇಳಿದಿರಿ. ನನ್ನ ದೃಷ್ಟಿಯಲ್ಲಿ ಅಥವಾ ನನ್ನ ಎನ್‌ಕ್ವೈರಿಯಲ್ಲಿ ಇದು ಸರಿಯಾಗಿ ಆಗಿಲ್ಲ. ಹಣ ಮಾತ್ರ ಹೋಗಿದೆ. ಕೊಲ್ಯಾಪ್ಸ್ ಆಗಿದೆ ಎಂದು ಹೇಳಿದ್ದೀರಿ, ಆದ್ದರಿಂದ ಇದರ ಬಗ್ಗೆ ಎನ್‌ಕ್ವೈರಿ ಮಾಡುತ್ತೀರಾ ? ಎರಡನೆಯದಾಗಿ ಘನಾನ್ಯ ಮಂತ್ರಿಗಳಲ್ಲಿ ನಾನು ಕೇಳುತ್ತೇನೆ. ಏನೆಂದರೆ, ಜಿಲ್ಲಾ ಪರಿಷತ್ತು ಆಗಬೇಕು ಎಂದು. ನಾಲ್ಕೈದು ಸಾವಿರ ರೂಪಾಯಿ ಖರ್ಚುಮಾಡಿದ್ದರೆ ಕಂಪ್ಲೀಟ್ ಆಗುತ್ತಿತ್ತು. ಬರೀ ಕರೆಸ್ಪಾಂಡೆನ್ಸ್‌ನಲ್ಲಿ ೧೦ ವರ್ಷಗಳಿಂದ ಹಾಗೇ ಇದೆ. ತಾವು ಕನ್‌ಸರ್ನ್ ಮಂತ್ರಿಗಳಿದ್ದೀರಿ, ತಾವು ನಿಮ್ಮದಲ್ಲಾ ಅಧಿಕಾರವನ್ನು ಡೀಸೆಂಟ್ರಲೈಸ್ ಮಾಡಿದರೆ ಒಳ್ಳೆಯದು, ತಾವು ಆ ಬಗ್ಗೆ ವಿಚಾರ ಮಾಡುತ್ತೀರಾ ?

ಶ್ರೀ ಬಿ. ರಾಮಯ್ಯ.— ಮಾನ್ಯ ಅಧ್ಯಕ್ಷರೆ, ಮಾನ್ಯ ಭೀಮಣ್ಣ ಖಂಡ್ರೆಯವರು ಬಹಳ ದಿವಸಗಳಿಂದ ಜಿಲ್ಲಾ ಪರಿಷತ್ತು ಆಗಬೇಕು ಎಂಬ ಕಳಕಳಿಯ ಅಭಿಪ್ರಾಯವನ್ನು ಕೊಡುತ್ತಾ ಇದ್ದಾರೆ. ನಾವೂ ಸಹ ಅದನ್ನು ಪರಿಶೀಲನೆ ಮಾಡುತ್ತೇವೆ ಎಂದು ಅವರಿಗೆ ಹೇಳುತ್ತಾ ಇದ್ದೇವೆ. ಬೇರೆ ಬೇರೆ ರಾಜ್ಯಗಳಲ್ಲಿ ಹೋಗಿ ನೋಡಬೇಕು, ಹೇಗೆ ಮಾಡಬೇಕು ಎಂದು ನೋಡಬೇಕು. ಏಕೆಂದರೆ ಇದನ್ನು ವ್ಯವಸ್ಥಿತವಾಗಿ ಮಾಡಬೇಕಾಗಿದೆ, ಅದನ್ನು ಪರಿಶೀಲನೆ ಮಾಡುತ್ತೇನೆ. ಮತ್ತೆ ೩ ಬಾವಿಗಳು ಕೊಲ್ಯಾಪ್ಸ್ ಆಗಿರುವ ಬಗ್ಗೆ ಹೇಗೆ ಹೇಳಿದ್ದಾರೆ. ಅದು ಅವರ ಭಾಲ್ಕಿ ತಾಲ್ಲೂಕಿನಲ್ಲಿ ೨, ಹುಮ್ನಾಬಾದ್‌ನಲ್ಲಿ —೧ ಬಾವಿ ಹೋಗಿದೆ. ಇದನ್ನು ನಾವು ಬೇರೆ ಬೇರೆ ಇಲಾಖೆಗಳಿಗೆ ಸಂಬಂಧಪಟ್ಟವರ ಹತ್ತಿರ ಮಾಡಿಸಿದ್ದೇವೆ. ಅವು ಯಾವರೀತಿ ಕೊಲ್ಯಾಪ್ಸ್ ಆಗಿದೆ ಎನ್ನುವ ವಿವರಗಳನ್ನು ನಾನು ತರಿಸಿ ಹೇಳಬೇಕಾಗಿದೆ. ಅಂತೂ ಮೂರು ಬಾವಿಗಳು ಹಾಳಾಗಿ ಬಿದ್ದು ಹೋಗಿವೆ, ಅವು ಸರಿಮಾಡುವಂಥ ಸ್ಥಿತಿಯಲ್ಲಿ ಇಲ್ಲ ಎನ್ನತಕ್ಕಂಥ ರಿಪೋರ್ಟ್ ಸಹ ನನ್ನ ಮುಂದೆ ಇದೆ.

SHORT NOTICE QUESTION AND ANSWER

Seniority List of Health Workers.

42 SRI S. S. ARAKERI (Balloli).—Will the Minister for Health and Family Welfare be pleased to state :—

(a) purpose of Amalgamation of Health Workers and cause impact as per Goverment Order dated 15-4-80 ;

(b) whether the present seniority of these Health Workers is fixed on pay scale or the date of entry into service ;

(c) whether the Government intend to restore the justice to all the 3,000 health workers by refixation of the seniority in the common gradation list on the basis of the date of entry ;

(d) whether the Government would assure to modify the Government Orders No. HFW 595 HSM 78, dated 15-4-80, para 4, Sub-Clause 3 of the above Order to set right the same ?